ಸಾಕ್ಷಿಯನ್ನು ದಿಃ **24.06.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಬಿ.ಆರ್.ಎಲ್.ವಕೀಲರಿಂದಃ-

ದಾವಾ ಐಟಂ ನಂಬರ 1ನ್ನು ನನ್ನ ತಾತಾ ಬೋರೆಗೌಡರವರು 1965ರಲ್ಲಿ ಸುಂದರ ರಾಜ್ ಎಂಬುವವರಿಂದ ಖರೀದಿಗೆ ಪಡೆದಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 3ನ್ನು ನನ್ನ ತಂದೆ ಕೆಂಪೇಗೌಡರವರು ಟಿ.ಕೆ.ಸತ್ಯನಾರಾಯಣರವರಿಂದ ಖರೀದಿಗೆ ಪಡೆದಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 2 ಅಸಲು ದಾವೆ ಸಂಖ್ಯೆ 260/1986ರ ನ್ಯಾಯಾಲಯದ ಆದೇಶದ ಪ್ರಕಾರ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ದಾವಾ ಐಟಂ ನಂಬರ 4ರ ಸ್ವತ್ತು ನನ್ನ ತಂದೆಗೆ ಭೂನ್ಯಾಯಮಂಡಳಿಯಿಂದ ಬಂದಿದ್ದು ಅದರಲ್ಲಿ ನನ್ನ ಚಿಕ್ಕಮ್ಮ ಮತ್ತು ಸೋದರಮಾವ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಐಟಂ ನಂಬರ 4ರ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ, ನನ್ನ ತಂದೆ ತಾಯಿ ಬದುಕಿದ್ದಾಗಲೇ ಅದನ್ನು ನನ್ನ ಚಿಕ್ಕಮ್ಮ ಮತ್ತು ಸೋದರಮಾವನಿಗೆ ಬಿಟ್ಟುಕೊಟ್ಟಿದ್ದರು ಎಂದರೆ ನನ್ನ ತಂದೆ ಬಿಟ್ಟು ಕೊಟ್ಟಿದ್ದರು.

1972ರ ಇಚೆಗೆ ದಾವಾ ಆಸ್ತಿಗಳ ಪೈಕಿ ನಮ್ಮ ಒಟ್ಟು ಕುಟುಂಬದ 19 ಎಕರೆ 10 ಗುಂಟೆ ಭೂಸ್ವಾಧೀನಗೊಂಡಿದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ 6ನ್ನು ನನ್ನ ತಂದೆ ಕೆಂಪೇಗೌಡರವರು 2004ರಲ್ಲಿ ಪೆತ್ತಾಯಮ್ಮರವರಿಂದ ಖರೀದಿಸಿದ್ದರು ಎಂದರೆ ಸರಿ. ದಾವಾ ಐಟಂ ನಂಬರ 8ರ ಸ್ವತ್ತಿನ ಖಾತೆಯು ನನ್ನ ಅಜ್ಜ ಬೋರೆಗೌಡ ರವರಿಂದ ನನ್ನ ತಂದೆಯ ಹೆಸರಿಗೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 8 ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ಪಹಣಿ ಮತ್ತು ಎಂ.ಆರ್.ನ್ನು ಹಾಜರುಪಡಿಸಿದ್ದೇನೆ. ದಾವಾ ಐಟಂ ನಂಬರ 1 ರಿಂದ 18ರ ಪೈಕಿ 2 ಎಕರೆ 12 ಗುಂಟೆ ಯನ್ನು ನನ್ನ ತಂದೆ ಗಿರಿಯಯ್ಯ ಮತ್ತು ಪುಟ್ಟಮ್ಮರವರಿಂದ ಖರೀದಿಸಿದ್ದಾರೆ ಎಂದರೆ ಸರಿ. ನಿಡಿ-51ರ ದಾಖಲೆಯಲ್ಲಿ ಚಂದ್ರಶೇಖರಾಧ್ಯರವರಿಂದ, ಕೆ.ಜಿ.ರಾಮಕೃಷ್ಣೆಗೌಡರವರು ಖರೀದಿಸಿದ್ದಾರೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-51ರಲ್ಲಿ ನನ್ನ ಖರೀದಿಸಿದ್ದಾರೆ ಎಂದು

ನಮೂದು ಇಲ್ಲ. ನಿಡಿ-52ರ ಪ್ರಕಾರ ಸರ್ವೇ ನಂ. 71/3, 71/5 ಹಾಗೂ 73/5 ರಲ್ಲಿ ಒಟ್ಟು 2 ಎಕರೆ 2 ಗುಂಟೆಯನ್ನು ನಾನು, 1ನೇ ಪ್ರತಿವಾದಿ ಮತ್ತು ವಾದಿ ನಮ್ಮ ಒಟ್ಟು ಕುಟುಂಬದ ದರದ್ದು ನಿಮಿತ್ತ ಸಂಜೀವಶೆಟ್ಟಿ ಎನ್ನುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಖರೀದಿಯಿಂದ ಬಂದ ಹಣವನ್ನು ನನ್ನ ತಂದೆಯ ಆರೋಗ್ಯ ಸಮಸ್ಯೆಗಾಗಿ ವಾದಿಯಿಂದ ಪಡೆದು ಬಳಸಿಕೊಂಡಿದ್ದರೂ ಸಹ ನಾವು ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂಗಿಯಾದ ವಾದಿಯ ಮದುವೆಯನ್ನು ನನ್ನ ತಂದೆಯೇ ಮಾಡಿದ್ದಾರೆ ಎಂದರೆ ಸರಿ. ನನ್ನ ಮತ್ತು ವಾದಿಯ ಮದುವೆ ಒಂದೇ ದಿನ ಒಂದೇ ಸ್ಥಳದಲ್ಲಿ ಆಗಿದೆ ಎಂದರೆ ಸರಿ. ನನ್ನ ಮತ್ತು ವಾದಿಯ ಮದುವೆಗೆ ಸುಮಾರು 500-600 ಜನ ಸೇರಿರಬಹುದು ಅದಕ್ಕೂ ಹೆಚ್ಚು ಜನ ಬಂದಿರಬಹುದು. ನಮ್ಮ ಮದುವೆಯಾಗಿ ಸುಮಾರು 30 ವರ್ಷಗಳಾಗಿವೆ. ಆ ಕಾಲಕ್ಕೆ ಮದುವೆಗೆ ಸುಮಾರು 1 ಲಕ್ಷ ಖರ್ಚಾಗಿದೆಯೇ ಎಂದರೆ ಅದಕ್ಕಿಂತಲೂ ಹೆಚ್ಚು ಖರ್ಚಾಗಿದೆ. ರೂ.5 ರಿಂದ 10 ಲಕ್ಷ ಖರ್ಚಾಗಿರಬಹುದು. ಮದುವೆಯನ್ನು ಊರಿನಲ್ಲಿಯೇ ಮಾಡಲಾಗಿದೆ. ವಾದಿಗೆ 250 ಗ್ರಾಂ ಚಿನ್ನ ಕೊಟ್ಟು ಮದುವೆ ಮಾಡಿದ್ದೇವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ, ದಾಖಲೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ, ನನ್ನ ತಂದೆ ಮದುವೆ ಮಾಡಿದ್ದರಿಂದ ನನ್ನ ಬಳಿ ದಾಖಲೆಗಳು ಇಲ್ಲ.

ವಾದಿಗೆ ಹೆಚ್.ಡಿ.ಕೋಟೆಯಲ್ಲಿ ರೂ.15 ರಿಂದ 20 ಲಕ್ಷ ಖರ್ಚು ಮಾಡಿ ಜಮೀನುಗಳನ್ನು ಖರೀದಿಸಿ ಕೊಡಲಾಗಿದೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಸರ್ವೇ ನಂ. 58/2ಎ ಯಲ್ಲಿ 2 ಎಕರೆ 28 ಗುಂಟೆಯ ಪಹಣಿ ಹಾಜರುಪಡಿಸಿದ್ದೇನೆ. ಬೇರೆ ಯಾವ ದಾಖಲೆ ಹಾಜರುಪಡಿಸಿದ್ದೇನೆ ಎಂದು ನೆನಪಾಗುತ್ತಿಲ್ಲ. ಸದರಿ ಜಮೀನುಗಳನ್ನು ವಾದಿಗೆ ನನ್ನ ತಂದೆ ಖರೀದಿಸಿಕೊಟ್ಟಿದ್ದಾರೆ. ರೂ.30 ಲಕ್ಷ ಖರ್ಚು ಮಾಡಿ ವಾದಿಗೆ ಮನೆ ನಿರ್ಮಿಸಿ ಕೊಟ್ಟಿದ್ದೇನೆ. ಆ ಮನೆ ವಾದಿಯ ಗಂಡನ ಹೆಸರಿನಲ್ಲಿದೆ. ನನ್ನ ಬಳಿ ರೂ.30 ಲಕ್ಷ ಹಣ ಇತ್ತು ಎಂದು ತೋರಿಸಲು ಭೂಸ್ವಾಧೀನದಿಂದ ಹಣ ಬಂದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. 1972 ರಿಂದ 2013ರವರೆಗೆ ಭೂಸ್ವಾಧೀನದಿಂದ

ಸುಮಾರು 19-20 ಲಕ್ಷ ಹಣ ಬಂದಿದೆ ಎಂದರೆ ನನಗೆ ಗೊತ್ತಿಲ್ಲ, ನನ್ನ ತಂದೆಗೆ ಬಂದಿತ್ತು. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ವ್ಯವಸಾಯಕ್ಕೂ ಕೂಡ ಹಣ ಖರ್ಚು ಮಾಡುತ್ತಿದ್ದರು ಎಂದರೆ ಎಲ್ಲದಕ್ಕೂ ಖರ್ಚು ಮಾಡುತ್ತಿದ್ದರು. ನನ್ನ ತಂದೆ ವಾದಿ ಹಾಗೂ ನಮ್ಮ ವಿದ್ಯಾಭ್ಯಾಸಕ್ಕೂ ಹಣ ಖರ್ಚು ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ಭೂ ಸ್ವಾಧೀನದ ಬಾಬ್ತು ಶೇಕಡಾ 75ರಷ್ಟು ಪರಿಹಾರ ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. 2013ರಲ್ಲಿ ನ್ಯಾಯಾಲಯದಿಂದ ಭೂಸ್ವಾಧೀನದ ಪರಿಹಾರದ ಬಾಬ್ತು 4-5 ಲಕ್ಷ ಹಣವನ್ನು ನಾನು, ವಾದಿ ಮತ್ತು 1ನೇ ಪ್ರತಿವಾದಿ ಪಡೆದುಕೊಂಡು ಸಮನಾಗಿ ಹಂಚಿಕೊಂಡಿದ್ದೇವೆ ಎಂದರೆ ರೂ.4,10,000/- ಪಡೆದುಕೊಂಡಿದ್ದೇವೆ. ಅದನ್ನು ಸಮನಾಗಿ ಹಂಚಿಕೊಂಡಿದ್ದೇವೆ.

ನಿಡಿ-37ರ ಕ್ರಯಪತ್ರವನ್ನು ವಾದಿಯ ಗಂಡನಿಗೆ ಚಂದ್ರಶೇಖರಾರಾಧ್ಯರವರು ಬರೆದುಕೊಟ್ಟಿದ್ದಾರೆ ಎಂದು ನಮೂದು ಇದೆ ಎಂದರೆ ಸರಿ. ನನ್ನ ತಂದೆಯೆ ಕೊಡಿಸಿದ್ದಾರೆ. ವಾದಿಯ ಗಂಡ ವೈದ್ಯರು. ಅವರಿಗೆ ತಮ್ಮ ವೃತ್ತಿಯಿಂದ ಮತ್ತು ತಂದೆಯ ಮನೆಕಡೆಯಿಂದ ಸಾಕಷ್ಟು ಸಂಪಾದನೆ ಇದೆ ಎಂದರೆ ಇಲ್ಲ. ನಮ್ಮ ಮನೆಯಲ್ಲಿಯೇ ಇದ್ದರು. ವಾದಿ ಮತುತ ಆಕೆಯ ಗಂಡ ನಮ್ಮ ಊರಿನಲ್ಲಿರುವ ಮನೆಯಲ್ಲಿದ್ದರು. ವಾದಿ ಮತ್ತು ಆಕೆಯ ಗಂಡ ನಮ್ಮ ಊರಿನ ಮನೆಯಲ್ಲಿದ್ದರು ಎಂದು ನಾನು ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ಅದನ್ನು ಬರೆಸಲು ತೊಂದರೆ ಇತ್ತೆ ಎಂದರೆ ಆ ಬಗ್ಗೆ ಸರಿಯಾಗಿ ತಿಳುವಳಿಕೆ ಇರಲಿಲ್ಲ. ನನ್ನ ತಂದೆ ಮತ್ತು ಅವರ ಕುಟುಂಬ ನಿರ್ವಹಣೆಗೆ ದಾವಾ ಸ್ವತ್ತುಗಳಿಂದ ಬಂದ ಆದಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ, ನನ್ನ ತಂದೆ ರಾಜಕೀಯದಲ್ಲಿದ್ದರು. ನನ್ನ ತಂದೆ ಸುಮಾರು 10 ವರ್ಷ ಕಾಂಗ್ರೆಸ್ ಪಕ್ಷದಲ್ಲಿ ಅಧ್ಯಕ್ಷರಾಗಿದ್ದರು. ನನ್ನ ತಂದೆ ಅಧ್ಯಕ್ಷರಾಗಿದ್ದರು ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ದಾವಾ ಆಸ್ತಿಗಳಿಂದ ಬರುತ್ತಿದ್ದ ಆದಾಯವನ್ನೆ ರಾಜಕೀಯಕ್ಕೂ ವೆಚ್ಚ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನನಗಾಗಲೀ, 1 ಮತ್ತು 3ನೇ ಪ್ರತಿವಾದಿಯರ ಹೆಸರಿಗಾಗಲೀ ಯಾವುದೇ ಮೃತ್ಯುಪತ್ರವನ್ನು ಬರೆದಿಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಬೇಕೆಂದು ಮೃತ್ಯುಪತ್ರ ಬರೆದಿಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ದಾವಾ ಆಸ್ತಿಗಳಲ್ಲಿ ಸಮನಾದ 1/3 ನೇ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಈಗಾಗಲೇ ವಾದಿಗೆ ಸುಮಾರು 13½ ಎಕರೆ ಜಮೀನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ವಾದಿಗೆ ಯಾವುದೇ ಜಮೀನುಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಆಸ್ತಿಗಳನ್ನು ನಾನು, 1 ನೇ ಪ್ರತಿವಾದಿ ಮತ್ತು ವಾದಿ ವಿಭಾಗ ಮಾಡಿದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ, ವಿಭಾಗ ಆಗಿಲ್ಲ, ಮೃತ್ಯುಪತ್ರ ಮಾತ್ರ ಬರೆದಿದ್ದಾರೆ.

ಮೃತ್ಯುಪತ್ರವನ್ನು ನನ್ನ ತಂದೆ ಬರೆದಿದ್ದಾರೆ ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ನನ್ನ ತಂದೆಯ ಸ್ನೇಹಿತರು ನನಗೆ ಹೇಳಿದರು ನಂತರ ನಾನು ಮತ್ತು 1 ನೇ ಪ್ರತಿವಾದಿ ದಾಖಲೆಗಳನ್ನು ಪಡೆದು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡೆವು. ಮೃತ್ಯುಪತ್ರದ ಮೂಲಕ ನಾನು ಮತ್ತು 1 ನೇ ಪ್ರತಿವಾದಿ ನಮ್ಮ ಹೆಸರಿಗೆ ಮಾಡಿಕೊಂಡ ಖಾತೆಯನ್ನು ವಾದಿ ಹುಣಸೂರು ಊವಿಭಾಗಾಧಿಕಾರಿಗಳ ಮುಂದೆ ಪ್ರಶ್ನಿಸಿದ್ದಾರೆ ಎಂದರೆ ಇಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.